## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

## ಮೂಲ ಪ್ರಮಾಣ ಪತ್ರಗಳಲ್ಲಿನ ತಿದ್ದುಪಡಿ ಮಾಡಿಸಲು ಮಾರ್ಗಸೂಚಿ

## Guidelines for SSLC Marks Card Correction

- ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ ಅಭ್ಯರ್ಥಿ ಹೆಸರು, ತಂದೆ ಹೆಸರು, ತಾಯಿ ಹೆಸರು, ಜನ್ಮ ದಿನಾಂಕ, Gender, ಮಾಧ್ಯಮ ಇತ್ಯಾದಿ ತಿದ್ದುಪಡಿ ಸಂಬಂಧ ಪ್ರಸ್ತಾವನೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಶಾಲಾ ದಾಖಲಾತಿಯ ಉಧೃತ ಭಾಗ Admission Register Extract ಹಾಗೂ ಜ್ಞಾಪನದೊಂದಿಗೆ ಕೆಳಕಂಡಂತೆ ಆಯಾ ವಿಭಾಗೀಯ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗುತ್ತದೆ.

- ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 100 ಡಿಟಿಬಿ 2014 ದಿನಾಂಕ: 26–10–2015 ರನ್ವಯ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ವಿದ್ಯಾರ್ಥಿಯ/ ತಂದೆ / ತಾಯಿ ಹೆಸರಿನಲ್ಲಿ ಜನ್ಮ ದಿನಾಂಕ Gender, ಮಾಧ್ಯಮ ತಿದ್ದುಪಡಿ ಇದ್ದಲ್ಲಿ ಸಂಬಂಧಿಸಿದ ಶಾಲೆಯ ಮೂಲ ದಾಖಲಾತಿ ವಹಿ ಪರಿಶೀಲಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ನೇರವಾಗಿ ಪ್ರಸ್ತಾವನೆಯನ್ನು ಮಂಡಳಿಗೆ ಕಳುಹಿಸಿ ಕ್ರಮವಹಿಸುವುದು.

- ಅಭ್ಯರ್ಥಿಯ ಅಂಕಪಟ್ಟಿಯಲ್ಲಿ ಮೇಲಿನಂತೆ ತಿದ್ದುಪಡಿ ಬಯಸಿದಲ್ಲಿ ಸಂಬಂಧಿಸಿದ ಶಾಲೆಯ ಮುಖಾಂತರ ಅರ್ಜಿ ಸಲ್ಲಿಸಿ, ಶಾಲೆಯಿಂದ ದಾಖಲಾತಿಯ ಉಧೃತಭಾಗ Admission Register Extract ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಜ್ಞಾಪನದೊಂದಿಗೆ ನಿಗಧಿತ ಶುಲ್ಕದೊಂದಿಗೆ ಉಧೃತಭಾಗವನ್ನು ಶಾಲೆಯ ಮುಖ್ಯಶಿಕ್ಷಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಧೃಢೀಕರಿಸಿರುವ ಪ್ರತಿಯೊಂದಿಗೆ ಪ್ರಸ್ತಾವನೆಯನ್ನು ಮಂಡಳಿಗೆ ಮತ್ತು ಸಂಬಂಧಿಸಿದ ವಿಭಾಗೀಯ ಕಛೇರಿಗೆ ಕಳುಹಿಸುವುದು.

- ಜನ್ಮ ದಿನಾಂಕ ತಿದ್ದುಪಡಿಗಾಗಿ ಸರ್ಕಾರದ ಆದೇಶ ಸಂಖ್ಯೆ ಇಡಿ 355 ಎಸ್.ಎಲ್.ಬಿ 2017, ಬೆಂಗಳೂರು ದಿನಾಂಕ: 16–09–2019 ರನ್ವಯ ದಂಡ ಶುಲ್ಕ ರೂ.800/– ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಡಿ 335 ಎಸ್.ಎಲ್.ಬಿ 2018 ದಿನಾಂಕ: 21–01–2019 ರನ್ವಯ ತಿದ್ದುಪಡಿ ಶುಲ್ಕ ರೂ.200/– ಒಟ್ಟು ರೂ. 1000/– ಪಾವತಿಸಬೇಕಾಗುತ್ತದೆ.

- ಜನ್ಮ ದಿನಾಂಕ ಮಾರ್ಪಾಡು ಮಾಡುವಾಗ ವಿದ್ಯಾರ್ಥಿ ಪಾಸಾದ ಐದು ವರ್ಷಗಳ ನಂತರದ ಪ್ರಕರಣಗಳಲ್ಲಿ ಅಭ್ಯರ್ಥಿಯು ಯಾವುದೇ ಸರ್ಕಾರಿ ಸೇವೆಯಲ್ಲಿ ಇಲ್ಲವೆಂಬ ಬಗ್ಗೆ ಸಂಬಂಧಿಸಿದ ತಹಸೀಲ್ದಾರ್‌ರಿಂದ ದೃಢೀಕರಿಸಿದ ನಿರುದ್ಯೋಗ ಪ್ರಮಾಣ ಪತ್ರ (NEC) Non Employment Certificate ಸಲ್ಲಿಸುವುದು.

## ನ್ಯಾಯಾಲಯದ ಆದೇಶಗಳನ್ವಯ ಪ್ರಮಾಣ ಪತ್ರಗಳಲ್ಲಿ ತಿದ್ದುಪಡಿ ಮಾಡಿಸಲು ಮಾರ್ಗಸೂಚಿ

## Guidelines for SSLC Marks Card Correction as per court orders

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 100 ಡಿಟಿಬಿ 2014 ದಿನಾಂಕ: 26–10–2015 ರನ್ವಯ ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿ ಹೆಸರು / ತಂದೆ/ತಾಯಿ ಹೆಸರು / ಜನ್ಮದಿನಾಂಕ, ತಿದ್ದುಪಡಿ ಸಂಬಂಧ ನ್ಯಾಯಾಲಯದ ಡಿಕ್ರಿ ಆದೇಶ ಪಡೆದ ಪ್ರಕರಣಗಳಲ್ಲಿ ಸದರಿ ಆದೇಶವನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕೆಳಕಂಡಂತೆ ವಿವರಿಸಿದೆ.

- ಎಸ್.ಎಸ್.ಎಲ್.ಸಿ. ಪಾಸದ ನಂತರದ ಅಭ್ಯರ್ಥಿಗಳ ಶಾಲಾ ದಾಖಲಾತಿ / ಅಂಕಪಟ್ಟಿಯಲ್ಲಿ ಹೆಸರು, ಅಡ್ಡ ಹೆಸರು, ಪೋಷಕರ ಹೆಸರು ಹಾಗೂ ಜನ್ಮದಿನಾಂಕ ಇತ್ಯಾದಿಗಳು ತಿದ್ದುಪಡಿಯಾಗ ಬೇಕಾಗಿದ್ದಲ್ಲಿ ನ್ಯಾಯಾಲಯದಿಂದ ಡಿಕ್ರಿ ಪಡೆದು ಬಂದ ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಶಾಲಾ ದಾಖಲಾತಿ ನಿಯಮಗಳನ್ವಯ

ಪರಿಶೀಲಿಸಿ ಜಿಲ್ಲಾ ಉಪನಿರ್ದೇಶಕರು ಪ್ರಸ್ತಾವನೆ ಸ್ವೀಕರಿಸಿದ 15 ದಿನಗಳೊಳಗಾಗಿ ಸೂಕ್ತ ತಿದ್ದುಪಡಿ ಮಾಡಿ ಆದೇಶ ಹೊರಡಿಸಬೇಕಿದೆ.

- ನ್ಯಾಯಾಲಯದ ಡಿಕ್ರಿ ಆದೇಶವನ್ನು ಅನುಷ್ಠಾನಗೊಳಿಸುವ ಪ್ರಾಧಿಕಾರ ಜಿಲ್ಲಾ ಉಪನಿರ್ದೇಶಕರು ಆಗಿರುತ್ತಾರೆ.

- ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು ಸಾ.ಶಿ.ಇ. ಇವರು ಶಾಲಾ ದಾಖಲಾತಿಗಳಲ್ಲಿ ಹೆಸರು ಬದಲಾವಣೆ / ಜನ್ಮ ದಿನಾಂಕ ಬದಲಾವಣೆ / ಜನ್ಮ ದಿನಾಂಕ ಬದಲಾವಣೆಗೆ ಸಂಬಂಧಿಸಿದಂತೆ, ಡಿಕ್ರಿ ಹಾಜರುಪಡಿಸಿದ ಸಂದರ್ಭದಲ್ಲಿ ಅಂತಹ ಡಿಕ್ರಿಯನ್ನು ಅನುಷ್ಠಾನಗೊಳಿಸುವುದರಿಂದ ವಿವಾದ ಉಂಟಾಗಬಹುದಾದಂತಹ ವಿಶೇಷ ಪ್ರಕರಣಗಳು ಕಂಡುಬಂದಲ್ಲಿ ಜಿಲ್ಲಾ ಸೆಷನ್ಸ್ ನ್ಯಾಯಾಲಯದ ಸರ್ಕಾರಿ ವಕೀಲರಿಂದ ಕಾನೂನು ಸಲಹೆ ಪಡೆದು ನಂತರ ಅಂತಹ ಡಿಕ್ರಿಯನ್ನು ಅನುಷ್ಠಾನಗೊಳಿಸಬಹುದಾಗಿದೆ.

- ತದನಂತರ ಉಪನಿರ್ದೇಶಕರು ಜ್ಞಾಪನಾವನ್ನಾಧರಿಸಿ, ಶಾಲಾ ಮುಖ್ಯಶಿಕ್ಷಕರು ಪ್ರಾಥಮಿಕ ಮತ್ತು ಪ್ರೌಢ ಶಾಲೆ ಮೂಲ ದಾಖಲಾತಿ ವಹಿಗಳಲ್ಲಿ ತಿದ್ದುಪಡಿ ಮಾಡಿಕೊಂಡು ನ್ಯಾಯಾಲಯದ ಆದೇಶ ಹಾಗೂ ಉಪನಿರ್ದೇಶಕರ ಜ್ಞಾಪನಾ ಸಂಖ್ಯೆಯನ್ನು ನಮೂದಿಸಿ, ಷರಾ ದಾಖಲಿಸಿ ಜೆರಾಕ್ಸ್ ಪ್ರತಿಗೆ ಉಪನಿರ್ದೇಶಕರಿಂದ ಮೇಲು ಸಹಿ ಪಡೆದುಕೊಳ್ಳತಕ್ಕದ್ದು.

- ಉಪನಿರ್ದೇಶಕರು ನೀಡಿದ ಜ್ಞಾಪನದೊಂದಿಗೆ, ಉಪನಿರ್ದೇಶಕರಿಂದ ದೃಢೀಕರಿಸಲ್ಪಟ್ಟ ಶಾಲಾ ದಾಖಲಾತಿಯ ಉದೃತ ಭಾಗ Admission Register Extract, ನ್ಯಾಯಾಲಯದ ಡಿಕ್ರಿ ಆದೇಶ, ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರ ಹಾಗೂ ನಿಗಧಿತ ಶುಲ್ಕವನ್ನು NEFT ಚಲನ್ ಮೂಲಕ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿ ಸಂಬಂದಿಸಿದ ವಿಭಾಗೀಯ ಕಛೇರಿಗೆ ಪ್ರಸ್ತಾವನೆಯನ್ನು ಶಾಲಾ ಮುಖ್ಯಶಿಕ್ಷಕರು ಸಲ್ಲಿಸಿ ತಿದ್ದುಪಡಿ ಮಾಡಿಸಿಕೊಳ್ಳಬಹುದಾಗಿದೆ.

- ದತ್ತು ಪ್ರಕರಣಗಳಲ್ಲಿ ನ್ಯಾಯಾಲಯದ ಡಿಕ್ರಿ ಪಡೆದು ನೊಂದಣಿ ದಾಖಲಾತಿಗಳನ್ನು ಒದಗಿಸಿದಾಗ ಮಾತ್ರ ದತ್ತು ತಂದೆ / ತಾಯಿ ಹೆಸರನ್ನು ಶಾಲಾ ದಾಖಲಾತಿಗಳಲ್ಲಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿಗಳಲ್ಲಿ ನಮೂದಿಸಲು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ/ಉಪನಿರ್ದೇಶಕರು (ಆಡಳಿತ)ರವರ ಹಂತದಲ್ಲಿಯೇ ಪರಿಶೀಲಿಸಿ ತಿದ್ದುಪಡಿಗೆ ಕ್ರಮ ತೆಗೆದುಕೊಳ್ಳತಕ್ಕದ್ದು.

**ಸರ್ಕಾರದ ಆದೇಶ ಸಂಖ್ಯೆಇಡಿ 355 ಎಸ್.ಎಲ್.ಬಿ 2017 ದಿನಾಂಕ: 16-09-2019 ರನ್ವಯ ನಿಗಧಿಪಡಿಸಲಾದ (ದಂಡ ಶುಲ್ಕದ ವಿವರ)**

| | **ದಾಖಲೆಗಳ ವಿವರ** | **ದಂಡ ಶುಲ್ಕ** | **ಒಟ್ಟು** |
|---|---|---|---|
| 1 | ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿಯಲ್ಲಿ ಅಭ್ಯರ್ಥಿಗಳ ಜನ್ಮದಿನಾಂಕ ತಪ್ಪಾಗಿದ್ದಲ್ಲಿ ತಿದ್ದುಪಡಿಗಾಗಿ ನಿಗಧಿಪಡಿಸಿದ ದಂಡ ಶುಲ್ಕ | ರೂ.800/- | ರೂ.800/- |
| 2 | ಅಭ್ಯರ್ಥಿಯ ಎಸ್.ಎಸ್.ಎಲ್.ಸಿ. ದ್ವಿತೀಯ ಅಂಕಪಟ್ಟಿ ಪಡೆದಿದ್ದಲ್ಲಿ ಆ ಅಂಕಪಟ್ಟಿಯಲ್ಲಿ ಭಾವಚಿತ್ರ ಅಂಟಿಸಿರುವ ಹಾಗೂ ಶಾಲಾ ಮುಖ್ಯಶಿಕ್ಷಕರು ವಿಳಾಸದ ಜೊತೆಗೆ ಸಹಿಯನ್ನು ಮಾಡಿರುವ ಇತ್ಯಾದಿ ಅಂಕಪಟ್ಟಿಯನ್ನು ವಿರೂಪಗೊಳಿಸಿರುವುದಕ್ಕೆ ಸಂಬಂದಿಸಿದತೆ, ಮುಖ್ಯಶಿಕ್ಷಕರಿಗೆ ವಿಧಿಸಿರುವ ದಂಡಶುಲ್ಕ | ರೂ.1000/- | ರೂ.1000/- |

**ಸರ್ಕಾರದ ಆದೇಶ ಸಂಖ್ಯೆ ಇಡಿ 355 ಎಸ್.ಎಲ್.ಬಿ. 2017 ದಿನಾಂಕ: 11-06-2020 (ಪರಿಷ್ಕೃತ ದರಗಳ ವಿವರ)**

| | **ಸೇವೆಗಳ ವಿವರ** | **ನಿಗಧಿಪಡಿಸಲಾದ ಶುಲ್ಕ** | **ಒಟ್ಟು** |
|---|---|---|---|
| 3 | ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಪ್ರಮಾಣ ಪತ್ರದಲ್ಲಿ ಜನ್ಮದಿನಾಂಕ ತಿದ್ದುಪಡಿ ಮತ್ತು ತಿದ್ದುಪಡಿಯಾದ ಹೊಸ ಅಂಕಪಟ್ಟಿ ಮುದ್ರಿಸಿ ನೀಡುವುದಕ್ಕೆ (ನ್ಯಾಯಾಲಯದ ಪ್ರಕರಣಗಳು ಸೇರಿದಂತೆ) | ರೂ.1000/- | ರೂ.1000/- |